■ ಶಶಿಕುಮಾರ್ ಸಿ.

# ಜಿಯೊ ಉಪಗ್ರಹ ಆಧಾರಿತ ಇಂಟರ್ನೆಟ್ ಸನ್ನಿಹಿತ



2023ರಲ್ಲಿ ನಡೆದ 'ಇಂಡಿಯಾ ಮೊಬೈಲ್ ಕಾಂಗ್ರೆಸ್'ನಲ್ಲಿ ಉಪಗ್ರಹ ಆಧಾರಿತ ಇಂಟರ್ನೆಟ್ ಸೇವೆ ಕಲ್ಪಿಸುವ ಪ್ರಾತ್ಯಕ್ಷಿಕೆಯನ್ನು ಜಿಯೊ ಪ್ರದರ್ಶಿಸಿತ್ತು. ಈಗ ಆ ಪ್ರಾತ್ಯಕ್ಷಿಕೆ ಸಾಕಾರಗೊಳ್ಳುವ ಸಮಯ ಸನ್ನಿಹಿತವಾಗಿದೆ.

ಭಾರತದಲ್ಲಿ ಸ್ಯಾಟಲೈಟ್ ಆಧಾರಿತ ಗಿಗಾಬೈಟ್ ಫೈಬರ್ ಸೇವೆ (Jio Space Fiber) ಪ್ರಾರಂಭಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಅಗತ್ಯವಾದ ಅನುಮತಿಗಾಗಿ ಈಗಾಗಲೇ ಜಿಯೊ ಅರ್ಜಿ ಸಲ್ಲಿಸಿದ್ದು, ಅನುಮತಿ ಸಿಕ್ಕ ಕೂಡಲೇ ನೂತನ ಸೇವೆ ಆರಂಭಿಸುವ ಸಾಧ್ಯತೆ ಇದೆ. ಅದಕ್ಕಾಗಿ ಎಲ್ಲ ರೀತಿಯ ತಯಾರಿಯನ್ನೂ ಈಗಾಗಲೇ ಕಂಪನಿಯು ಮಾಡಿಕೊಂಡಿದೆ.

ಉಪಗ್ರಹ ಆಧಾರಿತ ಇಂಟರ್ನೆಟ್ ಸೌಲಭ್ಯ ಪ್ರಾರಂಭವಾದಲ್ಲಿ, ಎಲಾನ್ ಮಸ್ಕ್ ಒಡೆತನದ 'ಸ್ಟಾರ್‌ಲಿಂಕ್', ಯುಟೆಲ್‌ಸ್ಯಾಟ್ ಗ್ರೂಪ್‌ನ 'ಒನ್‌ವೆಬ್' ಮತ್ತು ಅಮೆಜಾನ್‌ನ ಪ್ರಾಜೆಕ್ಟ್ 'ಕೈಪರ್' ಉಪಗ್ರಹ ಸೇವಾ ಕಂಪನಿಗಳೊಂದಿಗೆ ಜಿಯೊ ಸ್ಪರ್ಧೆಗೆ ನಿಲ್ಲಲಿದೆ.

ಜಿಯೊ ಟೆಲಿಕಾಂ ಭಾರತದಲ್ಲಿ 'ಜಿಯೊ ಸ್ಪೇಸ್ ಫೈಬರ್' ಅನ್ನು ತನ್ನ ಸ್ಯಾಟ್‌ಕಾಮ್ ತಂತ್ರಜ್ಞಾನದ ಆಧಾರದ ಮೇಲೆ ಅಭಿವೃದ್ಧಿಪಡಿಸಿದೆ. ಇದು ಜಾರಿಗೆ ಬಂದಲ್ಲಿ ದೇಶದ ಮೊದಲ ಉಪಗ್ರಹ ಆಧಾರಿತ ಇಂಟರ್ನೆಟ್ ಸೇವೆ ಕಲ್ಪಿಸಿದ ಶ್ರೇಯಕ್ಕೆ ಜಿಯೊ ಪಾತ್ರವಾಗಲಿದೆ. ಈ ಬಗ್ಗೆ ವರದಿ ಮಾಡಿರುವ ದಿ ಎಕನಾಮಿಕ್ ಟೈಮ್ಸ್, 'ಸ್ಯಾಟ್‌ಕಾಮ್ ತನ್ನ ಸೇವೆಗಳನ್ನು ಪ್ರಾರಂಭಿಸಲು ಜಿಯೊ ಇನ್‌ಸ್ಪೇಸ್(INSPAce)ನಿಂದ ಅಗತ್ಯವಿರುವ ಎಲ್ಲಾ ಅನುಮೋದನೆಗಳು ಮತ್ತು ಅಧಿಕಾರಗಳನ್ನು ಶೀಘ್ರದಲ್ಲೇ ಸ್ವೀಕರಿಸಬಹುದು' ಎಂದು ಉಲ್ಲೇಖಿಸಿದೆ. ಭಾರತದಲ್ಲಿ ಉಪಗ್ರಹ ಸೇವೆಗಳನ್ನು ನಿಯೋಜಿಸಲು ಅನುಮೋದನೆ, ಭದ್ರತಾ ಅನುಮತಿ ಮತ್ತು ಹಲವಾರು ಸಚಿವಾಲಯಗಳಿಂದ ಅನುಮೋದನೆಯಷ್ಟೇ ಬಾಕಿ ಇದೆ ಎಂದೂ ವರದಿ ಮಾಡಿದೆ.

ಗುಜರಾತ್‌ನ ಗಿರ್, ಛತ್ತೀಸ್‌ಗಢದ ಕೊರ್ಬಾ, ಒಡಿಶಾದ ನಬ್ರಂಗ್‌ಪುರ ಮತ್ತು ಅಸ್ಸಾಂನ ONGC–ಜೋರ್ಹತ್ ಪ್ರದೇಶದಲ್ಲಿ ಉಪಗ್ರಹ ಆಧಾರಿತ ಇಂಟರ್ನೆಟ್ ಸೇವೆ ಕಲ್ಪಿಸಲಾಗಿದೆ ಎಂದು ಜಿಯೊ 'ಇಂಡಿಯಾ ಮೊಬೈಲ್ ಕಾಂಗ್ರೆಸ್'ನಲ್ಲಿ ಹೇಳಿಕೊಂಡಿತ್ತು. ■

## ಬರಲಿದೆ ಓಲಾ ಕೃತ್ರಿಮ್

ಕ್ಯಾಬ್ ಹಾಗೂ ಎಲೆಕ್ಟ್ರಿಕ್ ಬೈಕ್ ಕಂಪನಿಯಾದ ಓಲಾವು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಕ್ಕೆ ಕಾಲಿಡುತ್ತಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಓಲಾ ಎಐ ಚಾಟ್‌ಬಾಟ್ ಸೇವೆಯನ್ನು ಭಾರತಕ್ಕೆಂದೇ ರೂಪಿಸಿರುವುದು ವಿಶೇಷ.

'ಮೇಡ್ ಫಾರ್ ಇಂಡಿಯಾ' ಘೋಷವಾಕ್ಯದೊಂದಿಗೆ ರೂಪುಗೊಳ್ಳುತ್ತಿರುವ ಈ ಸೇವೆಯನ್ನು ದೇಶದ 10 ಭಾಷೆಗಳಲ್ಲಿ ಕಲ್ಪಿಸಲಾಗುತ್ತದೆ ಎಂದು ಓಲಾ ಸ್ಥಾಪಕ ಭವಿಶ್ ಅಗರ್ವಾಲ್ ಹೇಳಿದ್ದಾರೆ. ಈ ತಂತ್ರಜ್ಞಾನಕ್ಕೆ ಅವರು 'ಕೃತ್ರಿಮ್' (ಕೃತಕ ಎಂದರ್ಥ) ಎಂದು ಹೆಸರಿಡಲಾಗಿದೆ. ಕಳೆದ ವರ್ಷದ ಏಪ್ರಿಲ್‌ನಿಂದಲೇ ಕೃತ್ರಿಮ್ ಎಸ್‌ಐ ಡಿಸೈನ್ಸ್ ಸಂಸ್ಥೆ ಅಸ್ತಿತ್ವಕ್ಕೆ ಬಂದಿದ್ದು, ಬೆಂಗಳೂರು ಮತ್ತು ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಕಚೇರಿಗಳನ್ನು ಹೊಂದಿದೆ. ಜನವರಿಯಲ್ಲೇ ಕೃತ್ರಿಮ್‌ನ ಚಾಟ್‌ಬಾಟ್ ಬೀಟಾ ಆವೃತ್ತಿಯು ಬಿಡುಗಡೆಯಾಗುವ ಸಾಧ್ಯತೆ ಇದೆ. ಇದು ಓಪನ್‌ಎಐನ ಚಾಟ್‌ಜಿಪಿಟಿ ಮಾದರಿಯಲ್ಲಿರಲಿದೆ.

ಬಂಗಾಳಿ ಭಾಷೆಯ ಕವಿತೆಗಳಿಂದ ಹಿಡಿದು ಬಾಲಿವುಡ್ ಸಿನಿಮಾಗಳು, ಮಸಾಲೆ ದೋಸೆ ತಯಾರಿಸುವುದು ಹೇಗೆ ಎನ್ನುವಲ್ಲಿಯವರೆಗೆ ಇದು ಮಾಹಿತಿ ನೀಡಲಿದೆ.

ಎಐ (ಆರ್ಟಿಫೀಷಿಯಲ್ ಇಂಟೆಲಿಜೆನ್ಸ್) ಮಾಡೆಲ್‌ಗಳ ಜತೆ ಬಳಕೆದಾರರು ಮಾತುಕತೆಯನ್ನೂ ನಡೆಸಬಹುದಾಗಿದೆ. ಈಗಾಗಲೇ ಭಾರತದಲ್ಲಿ ಸರ್ಕಾರದ ಭಾಷಿಣಿ ಯೋಜನೆಯನ್ನು ಆಧರಿಸಿ ಹಲವು ಸಂಸ್ಥೆಗಳು ಭಾರತೀಯ ಭಾಷಾ ಡೇಟಾಬೇಸ್ ರೂಪಿಸುವ ಮತ್ತು ಅದನ್ನು ಬಳಸಿಕೊಂಡು ಎಐ ಮಾಡೆಲ್‌ಗಳಿಗೆ ತರಬೇತಿ ನೀಡುವ ಕೆಲಸ ಮಾಡುತ್ತಿವೆ. ■